**All India Radio: Bangalore**
**National Bulletin In Kannada**
**26.10.2025 19.35 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**26.10.2025 19.35 p.m.**

**<><><><>**

ಮುಖ್ಯಾಂಶಗಳು

- ಸರ್ದಾರ್ ವಲ್ಲಭಭಾಯಿ ಪಟೇಲ್ ಜಯಂತಿ ನಿಮಿತ್ತ ದೇಶಾದ್ಯಂತ ಏಕತೆಗಾಗಿ ಓಟದಲ್ಲಿ ಭಾಗವಹಿಸುವಂತೆ ನಾಗರಿಕರಿಗೆ ಮನದ ಮಾತಿನಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಮನವಿ
- ಆರೋಗ್ಯಕರ ಭಾರತದ ಗುರಿ ಸಾಧಿಸಲು ಖಾಸಗಿ ಆರೋಗ್ಯ ಸಂಸ್ಥೆಗಳ ಸಹಕಾರ ಅಗತ್ಯ - ರಾಷ್ಟ್ರಪತಿ ದ್ರೌಪದಿ ಮುರ್ಮು
- ೨೦೨೫ರ ರಾಷ್ಟ್ರೀಯ ವಿಜ್ಞಾನ ಪುರಸ್ಕಾರ ಘೋಷಣೆ ; ಜಯಂತ್ ನಾರ್ಲಿಕರ್ ಅವರಿಗೆ ಮರಣೋತ್ತರ ವಿಜ್ಞಾನ ರತ್ನ ಪ್ರಶಸ್ತಿ
- ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಕ್ರಿಕೆಟ್ ; ಲೀಗ್ ಹಂತದ ಕೊನೆಯ ಪಂದ್ಯದಲ್ಲಿಂದು ಭಾರತ-ಬಾಂಗ್ಲಾದೇಶ ಮುಖಾಮುಖಿ

<><><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಂದು ತಮ್ಮ 'ಮನ್ ಕಿ ಬಾತ್' ಕಾರ್ಯಕ್ರಮದ ೧೨೭ ನೇ ಸಂಚಿಕೆಯ ಮೂಲಕ ಸಮಸ್ತ ಭಾರತೀಯರನ್ನುದ್ದೇಶಿಸಿ ಮಾತನಾಡಿದರು. ದೀಪಾವಳಿಯ ನಂತರ ದೇಶದಲ್ಲಿ ಮನೆ ಮಾಡಿರುವ ಛಠ್ ಪೂಜೆಯ ಸಂಭ್ರಮಕ್ಕೆ ಶುಭ ಹಾರೈಸಿದ ಅವರು, ಸ್ವಚ್ಛತಾ ಅಭಿಯಾನ, ಪರಿಸರ ಸಂರಕ್ಷಣೆ, ಭಾರತೀಯ ಶ್ವಾನ ತಳಿಗಳ ಮಹತ್ವ, 'ವಂದೇ ಮಾತರಂ' ಗೀತೆಯ ೧೫೦ ನೇ ವರ್ಷಾಚರಣೆ, ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವ ಸೇರಿದಂತೆ ಹಲವು ವಿಷಯಗಳ ಕುರಿತು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಛತ್ತೀಸ್‌ಗಢದ ಅಂಬಿಕಾಪುರದಲ್ಲಿ, ನಗರದಿಂದ ಪ್ಲಾಸ್ಟಿಕ್ ತ್ಯಾಜ್ಯವನ್ನು ಸ್ವಚ್ಛಗೊಳಿಸಲು ಒಂದು ವಿಶಿಷ್ಟ ಉಪಕ್ರಮವನ್ನು ಕೈಗೊಳ್ಳಲಾಗಿದೆ. ಅಂಬಿಕಾಪುರದಲ್ಲಿ ಗಾರ್ಬೆಜ್ ಕೆಫೆಗಳನ್ನು ತೆರೆಯಲಾಗಿದೆ. ಈ ಕೆಫೆಗಳು ಪ್ಲಾಸ್ಟಿಕ್ ತ್ಯಾಜ್ಯವನ್ನು ತರುವ ಜನರಿಗೆ, ಹೊಟ್ಟೆ ತುಂಬಾ ಊಟವನ್ನು ಒದಗಿಸುತ್ತವೆ. ಒಂದು ಕಿಲೋಗ್ರಾಂ ಪ್ಲಾಸ್ಟಿಕ್ ತರುವವರಿಗೆ ಮಧ್ಯಾಹ್ನದ ಊಟ ಅಥವಾ ರಾತ್ರಿ ಭೋಜನ ಮತ್ತು ಅರ್ಧ ಕಿಲೋಗ್ರಾಂ ತರುವವರಿಗೆ ಉಪಾಹಾರ ದೊರೆಯುತ್ತದೆ. ಅಂಬಿಕಾಪುರ ಮಹಾನಗರ ಪಾಲಿಕೆ ಈ ಕೆಫೆಗಳನ್ನು ನಡೆಸುತ್ತಿದೆ ಎಂದು ಹೇಳಿದರು.

ಬೆಂಗಳೂರಿನಲ್ಲಿ ಎಂಜಿನಿಯರ್ ಕಪಿಲ್ ಶರ್ಮಾ ಕೂಡ ಇದೇ ರೀತಿಯ ಸಾಧನೆಯನ್ನು ಮಾಡಿದ್ದಾರೆ. ಬೆಂಗಳೂರನ್ನು ಕೆರೆಕಟ್ಟೆಗಳ ನಗರ ಎಂದು ಕರೆಯಲಾಗುತ್ತದೆ. ಕಪಿಲ್ ಇಲ್ಲಿನ ಕೆರೆಗಳನ್ನು ಪುನರುಜ್ಜೀವನಗೊಳಿಸುವ ಅಭಿಯಾನವನ್ನು ಪ್ರಾರಂಭಿಸಿದ್ದಾರೆ ಎಂದರು. ಕಪಿಲ್ ಅವರ ತಂಡವು ಬೆಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ೪೦ ಬಾವಿ ಮತ್ತು ಆರು ಕೆರೆಗಳನ್ನು ಪುನರುಜ್ಜೀವನಗೊಳಿಸಿದೆ. ತಮ್ಮ ಧ್ಯೇಯ ಸಾಧನೆಗೆ ಅವರು ಉದ್ದಿಮೆಗಳು ಮತ್ತು ಸ್ಥಳೀಯ ನಿವಾಸಿಗಳನ್ನು ಸಹ ತೊಡಗಿಸಿಕೊಂಡಿರುವುದು ಗಮನಾರ್ಹ ಸಂಗತಿ.  ಅವರ ಸಂಘಟನೆಯು ಮರ ನೆಡುವ ಅಭಿಯಾನಗಳಲ್ಲಿಯೂ ತೊಡಗಿಸಿಕೊಂಡಿದೆ ಎಂದು ಪ್ರಧಾನಿ ಮೋದಿ ತಿಳಿಸಿದರು. ಸರ್ದಾರ್ ಪಟೇಲ್ ಅವರ ೧೫೦ನೇ ಜನ್ಮ ದಿನಾಚರಣೆಯು ಇಡೀ ದೇಶಕ್ಕೆ ಬಹಳ ವಿಶೇಷ ಸಂದರ್ಭವಾಗಿದೆ. ಸರ್ದಾರ್ ಪಟೇಲ್ ಆಧುನಿಕ ಕಾಲಘಟ್ಟದ ಮಹಾನ್ ವ್ಯಕ್ತಿಗಳಲ್ಲಿ ಒಬ್ಬರು. ಅವರು ಕಾನೂನಿನಲ್ಲಿ ಹೆಚ್ಚಿನ ಖ್ಯಾತಿಯನ್ನು ಗಳಿಸಬಹುದಿತ್ತು. ಆದರೆ ಗಾಂಧೀಜಿಯವರಿಂದ ಪ್ರೇರಿತರಾಗಿ, ಸ್ವಾತಂತ್ರ್ಯ ಚಳವಳಿಗೆ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡರು. ಖೇಡಾ ಸತ್ಯಾಗ್ರಹದಿಂದ ಹಿಡಿದು ಬೋರ್ಸಾದ್ ಸತ್ಯಾಗ್ರಹದವರೆಗೆ ಹಲವಾರು ಚಳವಳಿಗಳಿಗೆ ಅವರು ನೀಡಿದ ಕೊಡುಗೆಗಳು ಇಂದಿಗೂ ಸ್ಮರಣೀಯವಾಗಿವೆ. ಸ್ವಚ್ಛತೆ ಮತ್ತು ಉತ್ತಮ ಆಡಳಿತಕ್ಕೆ ಅವರು ಹೆಚ್ಚಿನ ಆದ್ಯತೆ ನೀಡಿದರು. ಉಪಪ್ರಧಾನಿ ಮತ್ತು ಗೃಹ ಸಚಿವರಾಗಿ ಅವರ ಕೊಡುಗೆಗಳಿಗೆ ನಾವೆಲ್ಲರೂ ಋಣಿಯಾಗಿರುತ್ತೇವೆ. ಸರ್ದಾರ್ ಪಟೇಲ್ ಭಾರತದ ಅಧಿಕಾರಶಾಹಿ ಚೌಕಟ್ಟಿಗೆ ಬಲವಾದ ಅಡಿಪಾಯವನ್ನು ಹಾಕಿದರು. ಅವರು ದೇಶದ ಏಕತೆ ಮತ್ತು ಸಮಗ್ರತೆಗೆ ಅಪ್ರತಿಮ ಪ್ರಯತ್ನ ಮಾಡಿದರು. ಅಕ್ಟೋಬರ್ ೩೧ ರಂದು ಸರ್ದಾರ್ ಸಾಹೇಬ್ ಅವರ ಜಯಂತಿ ನಿಮಿತ್ತ ದೇಶಾದ್ಯಂತ ನಡೆಯುವ ಏಕತೆಗಾಗಿ ಓಟದಲ್ಲಿ  ಎಲ್ಲರೂ ಭಾಗವಹಿಸುವಂತೆ ಪ್ರಧಾನಿ ನರೇಂದ್ರ ಮೋದಿ ಮನವಿ ಮಾಡಿದರು. ‘ವಂದೇಮಾತರಂ’ - ಮೊದಲ ಪದವೇ ನಮ್ಮ ಹೃದಯಗಳಿಗೆ ಭಾವನೆಗಳ ಮಹಾಪೂರವನ್ನೇ ಉಂಟುಮಾಡುತ್ತದೆ. ‘ವಂದೇಮಾತರಂ’ ಎಂಬ ಒಂದೇ ಪದದಲ್ಲಿ ಹಲವಾರು ಭಾವನೆಗಳು ಮತ್ತು ಅಪಾರ ಶಕ್ತಿ ಒಳಗೊಂಡಿದೆ. ಇದು ಭಾರತ ಮಾತೆಯ ವಾತ್ಸಲ್ಯವನ್ನು ಸಹಜವಾಗಿಯೇ ಅನುಭವಿಸುವಂತೆ ಮಾಡುತ್ತದೆ. ಭಾರತ ಮಾತೆಯ ಮಕ್ಕಳಾಗಿ ನಮ್ಮ ಜವಾಬ್ದಾರಿಗಳನ್ನು ಸಹ ಇದು ನಮಗೆ ನೆನಪಿಸುತ್ತದೆ. ಕಠಿಣ ಪರಿಸ್ಥಿತಿಗಳಲ್ಲಿ ‘ವಂದೇಮಾತರಂ’ ಪಠಣವು ೧.೪ ಶತಕೋಟಿ ಭಾರತೀಯರ ಮನಸ್ಸನ್ನು ಏಕತೆಯ ಶಕ್ತಿಯಿಂದ ತುಂಬುತ್ತದೆ ಎಂದು ಅವರು ಹೇಳಿದರು. ಆಪರೇಷನ್ ಸಿಂದೂರ, ಪ್ರತಿಯೊಬ್ಬ ಭಾರತೀಯನಿಗೂ ಹೆಮ್ಮೆ ತಂದಿದೆ. ಮಾವೋವಾದಿ

ಭಯೋತ್ಪಾದನೆಯಿಂದ ಆವೃತವಾಗಿದ್ದ ಪ್ರದೇಶಗಳನ್ನು ಸಹ ಸಂತೋಷದ ದೀಪಗಳು ಹೇಗೆ ಬೆಳಗಿಸಿವೆ ಎಂಬುದನ್ನು ಎತ್ತಿ ತೋರಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

**ಧ್ವನಿ : ಪ್ರಧಾನಮಂತ್ರಿ ನರೇಂದ್ರ ಮೋದಿ (೨೪ ಸೆಕೆಂಡ್‌ಗಳು)**

<><><><>

ಆರೋಗ್ಯಕರ ಮತ್ತು ಅಭಿವೃದ್ಧಿ ಹೊಂದಿದ ಭಾರತ ಗುರಿಯನ್ನು ಸಾಧಿಸಲು ಖಾಸಗಿ ವಲಯದ ಆರೋಗ್ಯ ಸಂಸ್ಥೆಗಳು ಅಮೂಲ್ಯ ಕೊಡುಗೆ ನೀಡಬಹುದಾಗಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ. ಉತ್ತರ ಪ್ರದೇಶದ ಗಾಜಿಯಾಬಾದ್‌ನ ಇಂದಿರಾಪುರಂನಲ್ಲಿ ಯಶೋಧ ಮೆಡಿಸಿಟಿ ಉದ್ಘಾಟಿಸಿದ ನಂತರ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ಆರೋಗ್ಯ ರಕ್ಷಣೆ ರಾಷ್ಟ್ರ ನಿರ್ಮಾಣದ ಅವಿಭಾಜ್ಯ ಅಂಗವಾಗಿರುವುದರಿಂದ ದೇಶಾದ್ಯಂತ ಆರೋಗ್ಯ ಮತ್ತು ವೈದ್ಯಕೀಯ ಮೂಲಸೌಕರ್ಯ ನಿರಂತರವಾಗಿ ವಿಸ್ತಾರಗೊಳ್ಳುತ್ತಿವೆ ಎಂದರು. ಯಾವುದೇ ನಾಗರಿಕರು ಪರಿಣಾಮಕಾರಿ ಆರೋಗ್ಯ ರಕ್ಷಣೆಯಿಂದ ವಂಚಿತರಾಗದಂತೆ ಆರೋಗ್ಯ ಸೇವೆಗಳನ್ನು ವಿಸ್ತರಿಸುವುದು ಮತ್ತು ಗುಣಮಟ್ಟದ ಸೇವೆಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವುದು ಎಲ್ಲ ಪಾಲುದಾರ ಸಂಸ್ಥೆಗಳ ಜವಾಬ್ದಾರಿಯಾಗಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರತಿಪಾದಿಸಿದರು.

<><><><>

೨೦೨೫ರ ರಾಷ್ಟ್ರೀಯ ವಿಜ್ಞಾನ ಪುರಸ್ಕಾರ ಘೋಷಿಸಲಾಗಿದೆ. ಪ್ರೋಫೆಸರ್ ಜಯಂತ್ ವಿಷ್ಣು ನಾರ್ಲಿಕರ್ ಅವರಿಗೆ ಮರಣೋತ್ತರವಾಗಿ ವಿಜ್ಞಾನ ರತ್ನ ಪ್ರಶಸ್ತಿ ಘೋಷಿಸಲಾಗಿದೆ. ವಿಜ್ಞಾನ ಶ್ರೀ ಪ್ರಶಸ್ತಿಗೆ ೮ ವಿಜ್ಞಾನಿಗಳು ಆಯ್ಕೆಯಾಗಿದ್ದಾರೆ. ೧೪ ಯುವ ವಿಜ್ಞಾನಿಗಳು 'ವಿಜ್ಞಾನ ಯುವ' ಪ್ರಶಸ್ತಿಗೆ ಭಾಜನರಾಗಿದ್ದಾರೆ. ಕೃಷಿ ವಿಜ್ಞಾನದಲ್ಲಿ ನೀಡಿದ ಕೊಡುಗೆಗಾಗಿ 'ಟೀಂ ಅರೋಮಾ ಮಿಷನ್ ಸಿಎಸ್‌ಐಆರ್'ಗೆ ವಿಜ್ಞಾನ ತಂಡ ಪ್ರಶಸ್ತಿ ನೀಡಲಾಗುತ್ತಿದೆ. ವಿಜ್ಞಾನ ರತ್ನ, ವಿಜ್ಞಾನ ಶ್ರೀ, ವಿಜ್ಞಾನ ಯುವ - ಶಾಂತಿ ಸ್ವರೂಪ್ ಭಟ್ನಾಗರ್ ಮತ್ತು ವಿಜ್ಞಾನ ತಂಡ ಎಂಬ ೪ ವಿಭಾಗಗಳ ಅಡಿಯಲ್ಲಿ ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆಯಲ್ಲಿ ಅಸಾಧಾರಣ ಕೊಡುಗೆಗಳನ್ನು ಗುರುತಿಸಿ, ಈ ಪ್ರಶಸ್ತಿಗಳನ್ನು ನೀಡಲಾಗುತ್ತದೆ.

<><><><>

ಛಠ್ ಪೂಜಾ ಹಬ್ಬದ ಅಂಗವಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ದೇಶದ ಜನತೆಗೆ ಶುಭ ಹಾರೈಸಿದ್ದಾರೆ. ಸೂರ್ಯದೇವನಿಗೆ ಅರ್ಘ್ಯ ಸಮರ್ಪಿಸುವ ಹಬ್ಬ ಇದಾಗಿದ್ದು, ನದಿ-ಕೆರೆ, ಜಲಮೂಲಗಳನ್ನು ಪೂಜಿಸುವುದರೊಂದಿಗೆ ತಮ್ಮ ಕುಟುಂಬದ ಸೌಖ್ಯಕ್ಕಾಗಿ ಭಕ್ತರು

ಪ್ರಾರ್ಥಿಸಿಕೊಳ್ಳುತ್ತಾರೆ. ಪರಿಸರ ಸಂರಕ್ಷಣೆ ಮತ್ತು ಸ್ವಚ್ಛತೆಯ ಸಂದೇಶವನ್ನು ಈ ಹಬ್ಬ ಹೊಂದಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ.

<><><><>

ಛತ್ತೀಸ್‌ಗಢದ ಕಂಕೇರ್ ಜಿಲ್ಲೆಯಲ್ಲಿ ೧೩ ಮಹಿಳಾ ಮಾವೋವಾದಿಗಳು ಸೇರಿದಂತೆ ಒಟ್ಟು ೨೧ ಮಾವೋವಾದಿಗಳು ಪೊಲೀಸರ ಮುಂದೆ ಶರಣಾಗಿದ್ದಾರೆ. ಇದೇ ವೇಳೆ ಅವರು, ೧೮ ಶಸ್ತ್ರಾಸ್ತ್ರಗಳನ್ನು ಪೊಲೀಸರಿಗೆ ಹಸ್ತಾಂತರಿಸಿದ್ದಾರೆ. ಇವುಗಳಲ್ಲಿ ಮೂರು ಎ.ಕೆ.-೪೭ ರೈಫಲ್‌ಗಳು, ೪ ಎಸ್‌ಎಲ್‌ಆರ್‌ಗಳು ಸೇರಿದಂತೆ ಸ್ಫೋಟಕ ವಸ್ತುಗಳು ಸೇರಿವೆ.

<><><><>

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ನಾಳೆಯಿಂದ ಬೆಲ್ಜಿಯಂನ ಬ್ರುಜೆಲ್ಸ್‌ಗೆ ಎರಡು ದಿನಗಳ ಭೇಟಿ ನೀಡಲಿದ್ದಾರೆ. ಐರೋಪ್ಯ ಒಕ್ಕೂಟದ ಕಾರ್ಯನಿರ್ವಾಹಕ ಉಪಾಧ್ಯಕ್ಷ ಮತ್ತು ಐರೋಪ್ಯ ವಾಣಿಜ್ಯ ಆಯುಕ್ತ ಮಾರೋಸ್ ಸೆಫ್ಕೋವಿಕ್ ಅವರೊಂದಿಗೆ ಉನ್ನತಮಟ್ಟದ ಸಂವಾದ ನಡೆಸಲಿದ್ದಾರೆ. ಸಮಗ್ರ, ಸಮತೋಲಿತ ಮತ್ತು ಪರಸ್ಪರ ಪ್ರಯೋಜನಕಾರಿ ವ್ಯಾಪಾರ ಒಪ್ಪಂದವನ್ನು ಮಾಡಿಕೊಳ್ಳಲು ಎರಡೂ ಕಡೆಯವರು ಪ್ರಯತ್ನಗಳನ್ನು ತೀವ್ರಗೊಳಿಸಿದ್ದಾರೆ. ಭಾರತ-ಐರೋಪ್ಯ ಒಕ್ಕೂಟ ಮುಕ್ತ ವ್ಯಾಪಾರ ಒಪ್ಪಂದ ಮಾತುಕತೆಗಳಲ್ಲಿ ಈ ಭೇಟಿ ನಿರ್ಣಾಯಕ ಹಂತದಲ್ಲಿದೆ. ಮಾತುಕತೆ ಸಮಯದಲ್ಲಿ, ಮಾರುಕಟ್ಟೆ ಪ್ರವೇಶ, ಸುಂಕರಹಿತ ಕ್ರಮಗಳು ಸೇರಿದಂತೆ ಪ್ರಸ್ತಾವಿತ ಎಫ್‌ಟಿಎ ಸಂಬಂಧಿತ ಪ್ರಮುಖ ಚರ್ಚೆಗಳು ನಡೆಯುವ ನಿರೀಕ್ಷೆಯಿದೆ.

<><><><>

ಅಮೆರಿಕ ಅಧ್ಯಕ್ಷ ಡೋನಾಲ್ಡ್ ಟ್ರಂಪ್, ಮಲೇಷಿಯಾಗೆ ೫ ದಿನಗಳ ಭೇಟಿ ನೀಡಿದ್ದು, ಏಷ್ಯಾ ಖಂಡದ ದೇಶಗಳೊಂದಿಗೆ ಅಮೆರಿಕದ ವಾಣಿಜ್ಯ ಸಂಬಂಧಗಳನ್ನು ಬಲಪಡಿಸಲು ಉದ್ದೇಶಿಸಿದ್ದಾರೆ. ಅನೇಕ ಏಷ್ಯಾ ದೇಶಗಳ ನಾಯಕರನ್ನು ಭೇಟಿ ಮಾಡುವ ಕಾರ್ಯಕ್ರಮದೊಂದಿಗೆ ಅಮೆರಿಕದ ವಾಣಿಜ್ಯ ಸಂಬಂಧಗಳತ್ತ ಟ್ರಂಪ್ ಗಮನಹರಿಸಲಿದ್ದಾರೆ. ಇತ್ತೀಚೆಗೆ ಆಯ್ಕೆಯಾದ ಜಪಾನ್ ನಾಯಕ ಸನಾವ್ ತಕೈಚಿ ಅವರನ್ನು ಟೋಕಿಯೊದಲ್ಲಿ ಮತ್ತು ಚೀನಾ ಅಧ್ಯಕ್ಷ ಝಿ ಜಿನ್‌ಪಿಂಗ್ ಅವರನ್ನು ದಕ್ಷಿಣ ಕೋರಿಯಾದಲ್ಲಿ ಟ್ರಂಪ್ ಭೇಟಿ ಮಾಡಲಿದ್ದಾರೆ. ಇದೇ ಸಂದರ್ಭದಲ್ಲಿ ಟ್ರಂಪ್ ಮತ್ತು ಮಲೇಷಿಯಾ ಪ್ರಧಾನಿ ಅನ್ವರ್ ಇಬ್ರಾಹಿಂ ಅವರ ಸಮ್ಮುಖದಲ್ಲಿ ಥೈಲ್ಯಾಂಡ್ ಮತ್ತು ಕಾಂಬೋಡಿಯಾ ಶಾಂತಿ ಸಂಧಾನ ಘೋಷಣೆಗೆ ಸಹಿ ಹಾಕಿವೆ. ಈ ಎರಡೂ ದೇಶಗಳ ನಡುವಿನ ಗಡಿ ಸಂಘರ್ಷಗಳಿಗೆ ಕೊನೆಯಾಡಲು ಈ ಜಂಟಿ ಘೋಷಣೆ ಪ್ರಮುಖ ಅಂಶವಾಗಿದೆ.

<><><><>

ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ ಇಸ್ತಾನ್‌ಬುಲ್‌ನಲ್ಲಿ ೨ನೇ ಸುತ್ತಿನ ಮಾತುಕತೆ ನಡೆಸಿದ್ದು, ಎರಡೂ ದೇಶಗಳ ಗಡಿಭಾಗದಲ್ಲಿ ಭಯೋತ್ಪಾದನಾ ಚಲನವಲನೆಗಳನ್ನು ನಿಗ್ರಹಿಸುವ ನಿಟ್ಟಿನಲ್ಲಿ ಈ ಮಾತುಕತೆ ಮಹತ್ವದ್ದಾಗಿದೆ. ಮಾತುಕತೆಗಳು ಮುರುದುಬಿದ್ದಲ್ಲಿ ಯುದ್ಧವೇ ಆಯ್ಕೆಯಾಗಿರುತ್ತದೆ ಎಂದು ಪಾಕಿಸ್ತಾನ ಮುಖ್ಯಸ್ಥರು ಹೇಳಿದ್ದರು. ನೂರಾರು ಸೈನಿಕರು, ನಾಗರಿಕರು ಮತ್ತು ಭಯೋತ್ಪಾದಕರು ಇದೇ ತಿಂಗಳ ಆರಂಭದಲ್ಲಿ ಭಯೋತ್ಪಾದನೆ ಚಟುವಟಿಕೆಯಿಂದ ಹತರಾಗಿದ್ದು, ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ ನಡುವೆ ಯುದ್ಧದ ಪರಿಸ್ಥಿತಿ ಸೃಷ್ಟಿಯಾಗಿತ್ತು.

<><><><>

ಮುಂಬೈನಲ್ಲಿ ನಡೆಯುತ್ತಿರುವ ಐಸಿಸಿ ಮಹಿಳಾ ವಿಶ್ವಕಪ್ ಕ್ರಿಕೆಟ್ ೨೦೨೫ರ ಲೀಗ್ ಹಂತದ ಕೊನೆಯ ಪಂದ್ಯದಲ್ಲಿಂದು ಭಾರತ ಮತ್ತು ಬಾಂಗ್ಲಾದೇಶ ಮುಖಿಮುಖಿಯಾಗಿದ್ದು, ಮಳೆಯ ಅಡಚಣೆಯಿಂದಾಗಿ ಪಂದ್ಯವನ್ನು ೪೩ ಓವರ್‌ಗಳಿಗೆ ನಿಗದಿಪಡಿಸಲಾಗಿತ್ತು. ಮೊದಲು ಬ್ಯಾಟಿಂಗ್ ಮಾಡುತ್ತಿರುವ ಬಾಂಗ್ಲಾದೇಶ ಇತ್ತೀಚಿನ ವರದಿ ಬಂದಾಗ ೧೨.೨ ಓವರ್‌ಗಳಲ್ಲಿ ೨ ವಿಕೆಟ್ ನಷ್ಟಕ್ಕೆ ೩೯ ರನ್ ಗಳಿಸಿದ್ದು, ಮಳೆಯಿಂದಾಗಿ ಪಂದ್ಯ ಸ್ಥಗಿತಗೊಂಡಿದೆ.

ಇದೇ ೩೦ರಂದು ಭಾರತ-ಆಸ್ಟ್ರೇಲಿಯಾ ಸೆಮಿಫೈನಲ್ ಪಂದ್ಯ ನಡೆಯಲಿದೆ.

<><><><>

ಚೀನಾದ ಚೆಂಗ್ಡುವಿನಲ್ಲಿ ನಡೆದ ೨೦೨೫ ರ ಬ್ಯಾಡ್ಮಿಂಟನ್ ಏಷ್ಯಾ ೧೭ ಮತ್ತು ೧೫ ವರ್ಷದೊಳಗಿನ ಚಾಂಪಿಯನ್‌ಶಿಪ್‌ಗಳ ಬಾಲಕಿಯರ ಸಿಂಗಲ್ಸ್ ಸ್ಪರ್ಧೆಗಳಲ್ಲಿ ಭಾರತ ಎರಡು ಚಿನ್ನದ ಪದಕಗಳನ್ನು ಗೆದ್ದಿದೆ. ೧೫ ವರ್ಷದೊಳಗಿನವರ ಬಾಲಕಿಯರ ಸಿಂಗಲ್ಸ್ ಬ್ಯಾಡ್ಮಿಂಟನ್ ಫೈನಲ್‌ನಲ್ಲಿ, ಶೈನಾ ಮತ್ತು ೧೭ ವರ್ಷದೊಳಗಿನವರ ಬಾಲಕಿಯರ ಸಿಂಗಲ್ಸ್ ಫೈನಲ್‌ನಲ್ಲಿ ದೀಕ್ಷಾ ಸುಧಾಕರ್ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>